ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಮಾನ್ಯ ಅಧ್ಯಕ್ಷರೇ, ನಾನು ಅರ್ಬನ್ ಪ್ರಾಪರ್ಟಿ ಮೇಲೆ ಪ್ರಶ್ನೆಯನ್ನು ಕಳುಹಿಸಿದ್ದೇನೆ, ಹೋದ ಸೆಷನ್‌ನಲ್ಲೂ ಕೇಳಿದ್ದೇನೆ, ಈ ಸೆಷನ್‌ನಲ್ಲೂ ಕೇಳಿದ್ದೇನೆ ಇವರು ಹೌಸಿಂಗ್ ಬಗ್ಗೆ ನಗರದಲ್ಲಿ ಬಡವರನ್ನು ಗುರ್ತಿಸುವುದರ ಬಗ್ಗೆ, ಹೌಸಿಂಗ್ ನಿರ್ಮಾಣದ ಬಗ್ಗೆ ಇಲ್ಲಿ ಪ್ರಶ್ನೆ ಬಂದಿರುವುದರಿಂದ ನನ್ನ ಪ್ರಶ್ನೆಗೂ ಈ ಪ್ರಶ್ನೆಗೂ ಸಂಬಂಧ ಇಲ್ಲ. ನಾನು ಕೇಳಿರುವ ಪ್ರಶ್ನೆ ಅರ್ಬನ್ ಪ್ರಾಪರ್ಟಿಗೆ ಸಂಬಂಧಪಟ್ಟ ಹಾಗೆ. ಈಗ ಕಳುಹಿಸಿರುವ ಉತ್ತರ ನನ್ನ ಪ್ರಶ್ನೆಗೆ ಸರಿಯಾದ ಉತ್ತರವಲ್ಲ. ಆದಂದರಿಂದ ಮಾನ್ಯ ನಗರಾಭಿವೃದ್ಧಿ ಸಚಿವರು ಅರ್ಬನ್ ಪ್ರಾಪರ್ಟಿ ಬಗ್ಗೆ ನಾನು ಕಳುಹಿಸಿರುವ ಪ್ರಶ್ನೆಗೆ ಸರಿಯಾದ ಉತ್ತರ ತರಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ.

ಮೈಸೂರು ಜಿಲ್ಲೆ ಉಟಗಳ್ಳಿ ಗ್ರಾಮದಲ್ಲಿ ವಂನೆ ನಿವೇಶನ ಹಂಚಿಕೆ ವಿಚಾರ ಕುರಿತು

೯೪೫. ಶ್ರೀ ಎಂ. ಶಿವಣ್ಣ (ಹೆಚ್. ಡಿ. ಕೋಟೆ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೭೮ನೇ ಇಸವಿಯಲ್ಲಿ ಮೈಸೂರು ತಾಲ್ಲೂಕು ಊಟಗಹಳ್ಳಿಯಲ್ಲಿ ಜನತಾ ನಿವೇಶನ ಗಳಿಗಾಗಿ ೬ ಎಕರೆ ೨ ಗುಂಟೆ ಭೂಮಿಯನ್ನು ವಶಪಡಿಸಿಕೊಂಡಿರುವುದು ನಿಜವಲ್ಲವೆ ?

ಆ) ಆ ಪೈಕಿ ಎಷ್ಟು ಮಂದಿ ನಿವೇಶನ ರಹಿತರಿಗೆ ನಿವೇಶನ ಮಂಜೂರು ಮಾಡಲಾಗಿದೆ.

ಇ) ನಿವೇಶನ ಪಡದಿರುವವರಿಗೆ ಅದರ ಹಿಂದಿನ ಭೂ ಮಾಲೀಕರು ಅಡ್ಡಿ ಪಡಿಸುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಅಡ್ಡಿಯಾಗುತ್ತಿರುವ ಜಮೀನಿನ ಹಿಂದಿನ ಮಾಲೀಕರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ.

ಉ) ನಿವೇಶನ ಹಕ್ಕು ಪತ್ರ ಪಡೆದು ಅಲೆಯುತ್ತಿರುವ ಜನರಿಗೆ ಅವರ ನಿವೇಶನ ಪ್ರವೇಶಿಸಲು ಸರಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಪಿ. ಜೆ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).—

ಅ) ಹೌದು

ಆ) ೯೬ ಹಕ್ಕು ಪತ್ರಗಳನ್ನು ಫಲಾನುಭವಿಗಳಿಗೆ ಹಂಚಲಾಗಿದೆ.

ಇ) ಬಂದಿದೆ.

ಈ) ಭೂಸ್ವಾಧೀನ ಪಡಿಸಲಾಗಿರುವ ಜಮೀನಿನಂಗಳ ಹದ್ದುಬಸ್ತನ್ನು ನಿಗದಿಪಡಿಸಲು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಭೂಮಾಪನ ಸಹಾಯಕ ನಿರ್ದೇಶಕರ ಸಹಕಾರ ಮತ್ತು ಪೋಲೀಸು ಬಂದುಬಸ್ತನ್ನು ಕೋರಿರುತ್ತಾರೆ.

ಉ) ಭೂಸ್ವಾಧೀನ ಪಡಿಸಲಾಗಿರುವ ಜಮೀನಿನಂಗಳ ಹದ್ದು ಬಸ್ತನ್ನು ನಿಗದಿ ಪಡಿಸಿದ ಮೇಲೆ ವಂನೆ ನಿವೇಶನಗಳನ್ನು ಫಲಾನುಭವಗಳ ವಶಕ್ಕೆ ಕೊಡಲಾಗುವುದು.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೆ, ಇಲ್ಲಿ ೧೯೭೮ನೇ ಇಸವಿಯಲ್ಲಿ ೨೦ ಅಂಶಗಳ ಕಾರ್ಯಕ್ರಮದ ಅಂಗವಾಗಿ ಸಂಮಾರು ೯೬ ಮಂದಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ೧೯೭೮ನೇ ಇಸವಿಯಲ್ಲಿ ಹಕ್ಕುಪತ್ರಗಳನ್ನು ಕೊಟ್ಟಿದ್ದಾಗ್ಯೂ ಕೂಡ ಈಗ ೧೯೮೬ನೇ ಇಸವಿಯಲ್ಲಿದ್ದೇವೆ, ಇದುವರೆಗೂ ಕೂಡ ಈ ೯೬ ಮಂದಿಗೆ ವಿತರಣೆ ಮಾಡಲಿಕ್ಕೆ ಆಗಿಲ್ಲ ಅಂದರೆ ಇದರ ಹಿಂದೆ ಯಾವ ಕೈವಾಡ ಇದೆ. ಈ ದಿಶೆಯಲ್ಲಿ ಹಕ್ಕುಪತ್ರಗಳನ್ನು ಕೊಟ್ಟಿರತಕ್ಕವರಿಗೆ ಅವರ ಸ್ಥಳಕ್ಕೆ ಹೋಗುವುದಕ್ಕೆ ಅವಕಾಶ ಸಿಕ್ಕಿಲ್ಲ ಅಂದರೆ ಅಧಿಕಾರಸ್ಥರು ಎಷ್ಟರಮಟ್ಟಿಗೆ ಕೆಲಸ ಮಾಡಿದ್ದಾರೆ ಎಂದು ಕೇಳಬೇಕಾಗುತ್ತದೆ. ಅಲ್ಲದೆ ಈ ೯೬ ಮಂದಿ ತಮ್ಮ ಸ್ಥಳಗಳಿಗೆ ಹೋಗಬೇಕಾದರೆ ಅಲ್ಲಿರತಕ್ಕ ಭೂಮಾಲೀಕರು ಅವರಿಗೆ ಅವಕಾಶಕೊಟ್ಟಿಲ್ಲ ಎನ್ನತಕ್ಕಂಥ ವಿಚಾರ ಕೂಡ ಇದೆ. ಮಂತಾ ಅಲ್ಲಿ ಹಕ್ಕು ಪತ್ರ ಪಡೆದಿರತಕ್ಕವರು ಹೋದಂಥ ಸಂದರ್ಭದಲ್ಲಿ ಅವರಿಗೆ ಜಾಗ ಬಿಡುವುದಕ್ಕೆ ಸಾಧ್ಯವಿಲ್ಲ

ಎನ್ನುತಕ್ಕಂಥ ಮಾತನ್ನು ಭೂಮಾಲೀಕರು ಹೇಳಿಕಳಿಸಿದ್ದಾರೆ ಮತ್ತು ಭೂ ಸ್ವಾಧೀನ ಪಡಿಸಿಕೊಂಡ ನಂತರ ಭೂಮಾಪನ ಅಧಿಕಾರಿಗಳು ಸರ್ವೇಯರ್‌ನ್ನು ಕಳಿಸಿದಂಥ ಸಂದರ್ಭದಲ್ಲಿ ಸರ್ವೇಯರ್ ಹೋದಾಗ ಅವರ ಕೆಲಸಕ್ಕೆ ಅಡ್ಡಿಪಡಿಸಿ ಕಳಿಸಿದ್ದಾರೆ. ಈ ವಿಚಾರ ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು. ಇನ್ನೊಂದು ವಿಚಾರ ಹೇಳುವುದಾದರೆ, ಈಗಾಗಲೇ ಏನು ಹಕ್ಕು ಪತ್ರಗಳನ್ನು ಕೊಟ್ಟಿದ್ದಾರೆ, ಆ ರೀತಿ ಕೊಟ್ಟಿರತಕ್ಕ ಜಾಗದಲ್ಲಿ ಅಕ್ರಮವಾಗಿ ೮–೧೦ ಮನೆಗಳನ್ನು ಏನು ಕಟ್ಟಿದ್ದಾರೆ, ಆ ಮನೆಗಳನ್ನು ಹೊಡೆಸಿಹಾಕಿ ಇವರಿಗೆ ಕೊಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಲ್ಲಿರತಕ್ಕ ಜಮೀನನ್ನು ಬಹಳ ಹಿಂದೆ ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇವೆ, ಆದರೆ ಅದರ ಬಗ್ಗೆ ಡಿಸ್ಪ್ಯೂಟ್ ಇದೆ. ಅಲ್ಲಿರತಕ್ಕ ಕೆಲವರು ಅಬ್‌ಸ್ಟ್ರಕ್ಟ್ ಮಾಡಿರುವುದು ನಿಜ; ಪೋಲೀಸ್ ರಕ್ಷಣೆ ಕೇಳಿದ್ದಾರೆ, ನಿಜ. ಇದನ್ನು ಉತ್ತರದಲ್ಲಿ ಹೇಳಿದ್ದೇನೆ. ಇದು ಮಾನ್ಯ ಸಿದ್ದರಾಮಯ್ಯನವರ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ಅವರು ಎರಡೂ ಕಡೆಯವರನ್ನು ಕರೆದು ರಾಜಿ ಮಾಡಿಸುತ್ತೇನೆಂದು ಮತ್ತು ಅದಕ್ಕಾಗಿ ಸಮಯ ಕೇಳಿದ್ದಾರೆ. ನಾನು ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿದ್ದೇನೆ. ಆದ್ದರಿಂದ ಸದ್ಯದಲ್ಲೇ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತೇನೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಮಂತ್ರಿಗಳು ಈ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ, ಸಂತೋಷ. ಆದರೆ ಒಂದು ಮಾತನ್ನು ಹೇಳುತ್ತೇನೆ. ಈಗಾಗಲೇ ೯೬ ಮಂದಿಗೆ ಏನು ಹಕ್ಕುಪತ್ರಗಳನ್ನು ವಿತರಣೆ ಮಾಡಿದ್ದಾರೆ, ಆ ಜಾಗದಲ್ಲಿ ಈಗಾಗಲೇ ಅಕ್ರಮವಾಗಿ ೮–೧೦ ಮನೆಗಳನ್ನು ಏನು ಕಟ್ಟಿದ್ದಾರೆ, ಆ ಮನೆಗಳನ್ನು ಹೊಡೆಸಿ ಹಾಕಿ ಯಾರಿಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದಾರೋ ಅವರಿಗೆ ಕೊಡುತ್ತೀರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸದ್ಯದಲ್ಲೇ ಅಂದರೆ ೧೬ನೇ ತಾರೀಖು ಮೈಸೂರಿಗೆ ಬರುತ್ತಾ ಇದ್ದೇನೆ. ಆಗ ಇದನ್ನು ನೋಡುತ್ತೇನೆ.

ಕೈಗಾರಿಕೆಯ ಅಭಿವೃದ್ಧಿಗಾಗಿ ಪ್ರೋತ್ಸಾಹ ಸೌಲಭ್ಯಗಳು

೧೩೭೮. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ ?

ಅ) ಕರ್ನಾಟಕ ಸರ್ಕಾರವು ಉದ್ದಿಮೆಗಳ ಬೆಳವಣಿಗೆ ದೃಷ್ಟಿಯಿಂದ ಜನತೆಗೆ ಅನೇಕ ಸಹಾಯ ಕೊಡುವ ಆಶ್ವಾಸನೆ ಕೊಟ್ಟು ಇನ್ಸೆಂಟೀವ್ ಜಾಹಿರ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮಾರಾಟ ತೆರಿಗೆ ವಿದ್ಯುದೀಪಗಳ ಮೇಲಿನ ಕರೆ ಕೊಟ್ಟಷ್ಟು ಹಣದ ಬದಲಾಗಿ ಬಡ್ಡಿ ರಹಿತ ಸಾಲ ಕೊಡುವುದಾಗಿ ಹೇಳಿ, ಕೇಳಿದರಿಗೆ ಕೊಡದೆ ಇರುವುದು ನಿಜವಲ್ಲವೇ ?

ಇ) ಈ ರೀತಿ ಆಶ್ವಾಸನೆ ಕೊಟ್ಟು ಈಡೇರಿಸದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಹೆಚ್. ಪಾಟೀಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿಗಳು). —

ಅ) ಹೌದು,

ಆ) ನಿಜವಲ್ಲ. ಕೊಟ್ಟಿರುವ ಮಾರಾಟ ತೆರಿಗೆ ಮಾತ್ರ ಸಾಲವಾಗಿ ಕೊಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಎಲೆಕ್ಟ್ರಿಸಿಟಿ ಟ್ಯಾಕ್ಸ್ ಬಗ್ಗೆ ಉತ್ತರದಲ್ಲಿ ಇಲ್ಲ ಎಂದು ಕೊಟ್ಟಿದ್ದಾರೆ, ಇದೆ ಎಂದು ಹೇಳಿದರೆ ಸಾಕು. ಇದನ್ನು ನಾನು ದೊಡ್ಡ ಚುಕ್ಕಿ ಮಾಡಿ ಕೇಳಲಿಕ್ಕೆ ಹೋಗುವುದಿಲ್ಲ. ಇಲ್ಲ ಎಂದು ಹೇಳಿದಿರಿ, ಇದೆ ಎಂದರೆ ಮುಗಿದು ಹೋಯಿತು. ಇಂಟೆನ್ಸಿವ್ ಕೊಟ್ಟಿದ್ದರೂ ಸಹ ಯಾರ್ಯಾರು ಅರ್ಹರಿದ್ದಾರೋ ಅವರಿಗೆ ಕೊಡಲಿಕ್ಕೆ ಹಣ ಇಲ್ಲ ಎಂದು ಒಂದು ಕಡೆ ಅಧಿಕಾರಸ್ಥರು ಹೇಳುತ್ತಾರೆ ಮತ್ತು ಹಣ ಸಾಕಷ್ಟು ಇದೆ, ವಿಜಾನೆಯಲ್ಲಿ ಬೇಕಾದಷ್ಟು ಇದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ, ಇದರಲ್ಲಿ ಯಾವುದು ಸತ್ಯ. ಈಗಲಾದರೂ ಅರ್ಹರಾದವರಿಂದ ಅರ್ಜಿಗಳು